RNU AIR DHARWAD

**JULY 22, 2024**

**AKASHAVANI - DHARWAD**

**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಹೆದ್ದಾರಿ ಕಾಮಗಾರಿಗಾಗಿ, ಗುಡ್ಡ ಕಡಿದಿದ್ದು ಅವಘಡಕ್ಕೆ ಕಾರಣ; ಕೇಂದ್ರ ಸಚಿವ ಗಡ್ಕರಿ ಅವರೊಂದಿಗೆ ಸಮಾಲೋಚನೆ – ಮುಖ್ಯಮಂತ್ರಿ ಸಿದ್ದರಾಮಯ್ಯ.**
- **ಭೂ ಕುಸಿತ ತಡೆಯಲು, ವೈಜ್ಞಾನಿಕ ರಸ್ತೆ ಕಾಮಗಾರಿ ಅಗತ್ಯ – ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ.**
- **ಕೊಡಗು, ಶಿವಮೊಗ್ಗ ಸೇರಿದಂತೆ ಪಶ್ಚಿಮಘಟ್ಟ ತಪ್ಪಲಿನ ದೇವರ ಕಾನುಗಳಿಗೆ, ರೈತರೇ ರಕ್ಷಣೆ – ಸೋಂದಾ ಸ್ವರ್ಣವಲ್ಲಿ ಶ್ರೀ.**
- **ಇಂದು ರಾಷ್ಟ್ರೀಯ ಧ್ವಜ ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಉತ್ತರಕನ್ನಡ ಜಿಲ್ಲೆ ಅಂಕೋಲಾ ತಾಲೂಕಿನ, ಶಿರೂರಿನಲ್ಲಿ ಗುಡ್ಡ ಕುಸಿದು, ದ್ವೀಪದಂತಾಗಿದೆ. ಸುತ್ತಲೂ ಕಾಳಿ ನದಿ ಭೋರ್ಗರೆದು ಹರಿಯುತ್ತಿದೆ. ನಡುವೆ ಅರ್ಧ ಕುಸಿದ ಗುಡ್ಡ ನಿಂತಿದೆ. ಕಾರ್ಯಾಚರಣೆ ವೇಳೆ ಎದುರಾಗಬಹುದಾದ ಅಪಾಯಗಳು ಮತ್ತು ಸವಾಲುಗಳ ಬಗ್ಗೆ, ಉನ್ನತ ಮಟ್ಟದ ತಜ್ಞರಿಂದ ಮಾಹಿತಿ ಪಡೆದು, ಅಗತ್ಯ ತಂತ್ರಜ್ಞಾನದ ನೆರವು ಪಡೆಯುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು. 7 ಜನ ಸಾವಿಗೀಡಾಗಿ, ಹಲವು ಜನ ಕಾಣೆಯಾದ ಗುಡ್ಡ ಕುಸಿತದ ಸ್ಥಳಕ್ಕೆ ಅವರು ಭೇಟಿ ನೀಡಿ, ರಕ್ಷಣಾ ಕಾರ್ಯಾಚರಣೆ ವೀಕ್ಷಿಸಿದರು. ಅತ್ಯಂತ ಅಪಾಯಕಾರಿ ಸನ್ನಿವೇಶದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ, ರಾಜ್ಯ ಹಾಗೂ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಸಿಬ್ಬಂದಿಗಳ ಕಾರ್ಯಕ್ಷಮತೆಯನ್ನು, ಮುಖ್ಯಮಂತ್ರಿ ಶ್ಲಾಘಿಸಿದರು.**

ಕಾರ್ಯಾಚರಣೆ ನಡೆಯುತ್ತಿರುವ ಜಾಗ ಮತ್ತು ಮಣ್ಣು ತುಂಬಿರುವ ರಸ್ತೆಯೂ ಕುಸಿಯುವ ಸಾಧ್ಯತೆ ಇದೆ. ಹೀಗಾಗಿ ರಕ್ಷಣಾ ಕಾರ್ಯದಲ್ಲಿ ತೊಡಗಿರುವ ಸಿಬ್ಬಂದಿ, ಜಾಗರೂಕರಾಗಿರುವಂತೆ ಮುಖ್ಯಮಂತ್ರಿ ಕಾಳಜಿ ವ್ಯಕ್ತ ಪಡಿಸಿದರು.

<><><>

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, 'ನಾಲ್ಕು ತಂಡಗಳು ಗುಡ್ಡ ಕುಸಿದ ಬಳಿಕ, ಕೆಳಗೆ ಸಿಲುಕಿರಬಹುದಾದ ಜನರ ಪತ್ತೆಗೆ, ರಾಡಾರ್ ತಂತ್ರಜ್ಞಾನ ಬಳಸಿ ಕಾರ್ಯಾಚರಣೆ ನಡೆಸುತ್ತಿವೆ. ಇನ್ನೂ ನಾಲ್ಕು ತಂಡಗಳು ಮತ್ತೊಂದು ಬದಿಯ ನದಿಯೊಳಗೆ ಕಾರ್ಯಾಚರಣೆ ಕೈಗೊಂಡಿವೆ. ಕಂದಾಯ ಖಾತೆ ಸಚಿವ ಕೃ ಣ್ಣ ಬೈರೇಗೌಡರು ಸ್ಥಳದಲ್ಲಿಯೇ ಇದ್ದು, ಉಸ್ತುವಾರಿ ವಹಿಸಿದ್ದಾರೆ' ಎಂದರು. 'ಗುಡ್ಡ ಕುಸಿತಕ್ಕೆ ರಾಷ್ಟ್ರೀಯ ಹೆದ್ದಾರಿಗೆ ಅವೈಜ್ಞಾನಿಕವಾಗಿ ಗುಡ್ಡ ಕಡಿದಿದ್ದು ಕಾರಣ ಎಂಬುದಾಗಿ, ಜನರು ದೂರಿದ್ದಾರೆ. ಈ ಬಗ್ಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ಜೊತೆ ಸಮಾಲೋಚಿಸುವೆ' ಎಂದರು.

<><><>

ರಾಷ್ಟ್ರೀಯ ಹೆದ್ದಾರಿಯಲ್ಲಿ, ಪದೇ ಪದೇ ಭೂ ಕುಸಿತ ಉಂಟಾಗುತ್ತಿದೆ. ಮುಂಬರುವ ದಿನಗಳಲ್ಲಿ, ವೈಜ್ಞಾನಿಕ ರಸ್ತೆ ಕಾಮಗಾರಿ ಖಾತ್ರಿ ಪಡಿಸಿ, ಭೂ ಕುಸಿತದ ಹಾನಿಗೆ ತಡೆಯೊಡ್ಡಬೇಕು ಎಂದು, ಕೇಂದ್ರ ಭೂ ಸಾರಿಗೆ ಖಾತೆ ಸಚಿವ ನಿತಿನ್ ಗಡ್ಕರಿ ಅವರಿಗೆ, ಮನವಿ ಮಾಡುವುದಾಗಿ, ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ, ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ. ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ದೊಡ್ಡ ತಪ್ಪಲು ಬಳಿ, ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ 75ರ, ಗುಡ್ಡ ಕುಸಿದ ಸ್ಥಳಕ್ಕೆ, ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ್ ಅವರೊಂದಿಗೆ, ಭೇಟಿ ನೀಡಿ ಪರಿಶೀಲಿಸಿದರು. 2018 ರ ಬಳಿಕ, ಅತೀ ಹೆಚ್ಚು ಪ್ರಮಾಣದಲ್ಲಿ ಮಳೆಯಾಗಿದೆ. ಜಲಾಶಯಗಳು ಭರ್ತಿಯಾಗಿವೆ. ನೆರೆ ರಾಜ್ಯಗಳೊಂದಿಗೆ ನದಿ ನೀರು ಹಂಚಿಕೆ ಸಂಘರ್ಷಕ್ಕೆ, ತಾತ್ಕಾಲಿಕ ವಿರಾಮ ದೊರೆಕಿದೆ ಎಂದರು.

<><><>

ಆರ್. ಅಶೋಕ್ ಮಾತನಾಡಿ, ರಾಜ್ಯ ಸರ್ಕಾರ ಸಮರೋಪಾದಿಯಲ್ಲಿ ಪ್ರವಾಹ ನಿರ್ವಹಿಸಬೇಕು. ಸಂತ್ರಸ್ಥರಿಗೆ ಸಕಾಲಿಕವಾಗಿ ಸೂಕ್ತ ಪರಿಹಾರ ಪಾವತಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

<><><>

ಉತ್ತರಕನ್ನಡ ಜಿಲ್ಲೆಯಾದ್ಯಂತ ಅಂದಾಜು 50 ಸಾವಿರ ಹೆಕ್ಟರ್ ಗೋಮಾಳ ಭೂಮಿಯನ್ನು ರೈತರೇ ನಿರ್ವಹಿಸಿ, ರಕ್ಷಿಸುತ್ತಿದ್ದಾರೆ. ಪಶ್ಚಿಮ ಘಟ್ಟದ ಕೊಡಗು, ಶಿವಮೊಗ್ಗ, ದಕ್ಷಿಣಕನ್ನಡ ಹಾಗೂ ಉತ್ತರಕನ್ನಡ ಜಿಲ್ಲೆಗಳಲ್ಲಿ ನೂರಾರು ದೇವರ ಕಾನುಗಳಿವೆ. ಯುನೆಸ್ಕೋ, ಇದೊಂದು ಅನನ್ಯ, ಸಾಮುದಾಯಿಕ ಸಹಭಾಗಿತ್ವದ ಕಾಡು ರಕ್ಷಣಾ ಪದ್ಧತಿ ಎಂದು, ಶ್ಲಾಘಿಸಿದೆ. ಇತ್ತೀಚೆಗೆ ಗುಡ್ಡ ಹಾಗೂ ಭೂ ಕುಸಿತದ ಪರಿಹಾರ ಕ್ರಮಗಳ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಸೋಂದಾ ಶ್ರೀ ಸ್ವರ್ಣವಲ್ಲಿ ಸಂಸ್ಥಾನದ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ.

<><><>

ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಭೂ ಕುಸಿತ ಸಂಭವಿಸಿರುವ ಮಡಿಕೇರಿ–ಸಂಪಾಜೆ ರಾಷ್ಟ್ರೀಯ ಹೆದ್ದಾರಿಯ ಕರ್ತೋಜಿ,ಗೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು  ಭೇಟಿ ನೀಡಿ, ಪರಿಸ್ಥಿತಿ ಅವಲೋಕಿಸಿದರು. ಬಳಿಕ ಕೊಯನಾಡು ಬಳಿ, ಮಳೆಯಿಂದ ಹಾನಿಗೀಡಾದ, ಸರ್ಕಾರಿ ಶಾಲೆಯನ್ನು ವೀಕ್ಷಿಸಿದರು. ಗುಡ್ಡದ ಮಣ್ಣನ್ನು ರಸ್ತೆಗೆ ಸಾಗಿಸುತ್ತಿದ್ದು, ಮೊದಲು ಈ ಕೆಲಸ ಸ್ಥಗಿತವಾಗಬೇಕು ಎಂದು ಸ್ಥಳೀಯರು, ಸಚಿವರ ಗಮನಕ್ಕೆ ತಂದರು. ರಸ್ತೆ ಅಗಲೀಕರಣದ ಕಾಮಗಾರಿಗಳಿಂದ ಈ ಸ್ಥಿತಿ ಉದ್ಭವಿಸಿದೆ ಎಂದು, ದೂರಿದರು. ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಸಚಿವ ಎನ್.ಎಸ್.ಬೋಸರಾಜು ಅವರು, ಮಳೆ ಮತ್ತು ಪ್ರವಾಹದ ಪರಿಹಾರಕ್ಕೆ, ಮುಖ್ಯಮಂತ್ರಿಯವರಿಗೆ ವಿಶೇಷ ಪ್ಯಾಕೇಜ್ ಬಿಡುಗಡೆ ಮಾಡಲು ಮನವಿ ಮಾಡುವುದಾಗಿ, ತಿಳಿಸಿದರು.

<><><>

ಉಡುಪಿಯ ಪಡುತೋಣ್ಸೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ, ಗುಜ್ಜರ ಬೆಟ್ಟು ಗ್ರಾಮಕ್ಕೆ ಭೇಟಿ ನೀಡಿದ, ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್, ಕಡಲ್ಕೊರೆತದಿಂದ ಹಾನಿಗೊಳಗಾದ ಪ್ರದೇಶವನ್ನು ಪರಿಶೀಲಿಸಿದರು. ಮಳೆಯಿಂದ ಆಗಿರುವ ನಷ್ಟದ ವರದಿ ಶೀಘ್ರ ಸಲ್ಲಿಸಿ, ಸಂತ್ರಸ್ಥರಿಗೆ ಪರಿಹಾರ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಕಡಲ್ಕೊರೆತ ನಿರ್ವಹಿಸಲು 5 ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ ಎಂದು, ಸಚಿವರು ತಿಳಿಸಿದರು.

<><><>

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ, ಮಳೆ ಹಾನಿ ಪ್ರದೇಶಗಳಿಗೆ ಶಾಸಕಿ ನಯನ ಮೋಟಮ್ಮ ಭೇಟಿ ನೀಡಿ ಪರಿಶೀಲಿಸಿದರು. ಮೂಡಿಗೆರೆ ವಿಧಾನಸಭಾ ಕ್ಷೇತ್ರದಲ್ಲಿ, 25 ಮನೆಗಳಿಗೆ ಹಾನಿಯಾಗಿದೆ. ಆ ಕುಟುಂಬಗಳಿಗೆ ಆಹಾರದ ಕಿಟ್ ನೀಡಲಾಗಿದೆ. ಕೂಡಲೇ ಪರಿಹಾರ ಒದಗಿಸಲು, ಕ್ರಮ ಕೈಗೊಳ್ಳಲಾಗುವುದು ಎಂದರು.

<><><>

ಬೆಳಗಾವಿ ತಾಲೂಕಿನ ಅಂಗನವಾಡಿ ಕೇಂದ್ರ, ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಇಂದು ಮತ್ತು ನಾಳೆ ರಜೆ ಘೋಷಿಸಲಾಗಿದೆ. ಖಾನಾಪೂರ ತಾಲೂಕಿನಾದ್ಯಂತ, ಎಲ್ಲ ಅಂಗನವಾಡಿ, ಪ್ರಾಥಮಿಕ ಹಾಗೂ ಪ್ರೌಢ ಶಾಲೆ ಮತ್ತು ಪಿ.ಯು. ಕಾಲೇಜುಗಳಿಗೆ, ಇಂದು ಮತ್ತು ನಾಳೆ ರಜೆ ಘೋಷಿಸಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಆದೇಶಿಸಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆಯಾದ್ಯಂತ ಇಂದು, ಶಾಲೆ ಮತ್ತು ಪಿ.ಯು. ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

<><><>

ಇಂದು ರಾಷ್ಟ್ರೀಯ ಧ್ವಜ ದಿನ. ಸಂವಿಧಾನ ತ್ರಿವರ್ಣ ಧ್ವಜವನ್ನು, ರಾಷ್ಟ್ರೀಯ ಧ್ವಜವನ್ನಾಗಿ ಅಂಗೀಕರಿಸಿ, ಮಾನ್ಯತೆ ನೀಡಿದ ದಿನವಿಂದು. ರಾಷ್ಟ್ರ ಧ್ವಜವು, ಸ್ವಾತಂತ್ರ್ಯ, ಸಾರ್ವಭೌಮತ್ವ. ದೇಶಭಕ್ತಿ ಮತ್ತು ಗೌರವ ಭಾವವನ್ನು ಉದ್ದೀಪಿಸಲು, ಕಾರಣರಾದ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನಗಳನ್ನು ಪ್ರತಿಬಿಂಬಿಸುತ್ತದೆ. ರಾಷ್ಟ್ರ ಧ್ವಜ, ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆ ಮೌಲ್ಯಗಳನ್ನು, ಮುಂದಿನ ಪೀಳಿಗೆಗೆ ಪ್ರೇರೇಪಿಸಲಿ ಎಂಬ ಸದುದ್ದೇಶ ಧ್ವಜ ದಿನಾಚರಣೆ ಉದ್ದೇಶ.

<><><>

ದೇಶದಲ್ಲಿ ಕೃಷಿ ವಿಜ್ಞಾನ ಕೇಂದ್ರಗಳು ಕಾರ್ಯಾರಂಭಿಸಿ, 50 ವರ್ಷ ತುಂಬುತ್ತಿದೆ.  ಸುವರ್ಣ ಸಂಭ್ರಮ ಆಚರಣೆಯ ಅಂಗವಾಗಿ, ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ ಎಂದು, ದಾವಣಗೆರೆ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾಕ್ಟರ್ ಟಿ.ಎನ್.ದೇವರಾಜ್ ತಿಳಿಸಿದ್ದಾರೆ. ಚನ್ನಗಿರಿ ತಾಲೂಕು, ರಾಜಗೊಂಡನಹಳ್ಳಿ ತಾಂಡಾದಲ್ಲಿ, ತೋಟಗಾರಿಕೆ ಸಸಿಗಳನ್ನು ನೆಟ್ಟು ಅವರು ಮಾತನಾಡಿದರು.

ರೈತರ ಶ್ರಮ ಕಡಿಮೆ ಮಾಡುವ, ಆರ್ಥಿಕ ಹೊರೆಯನ್ನು ಇಳಿಸುವ, ಸರಳ ತಂತ್ರಜ್ಞಾನಗಳನ್ನು, ರೈತರ ಜಮೀನುಗಳಿಗೆ ತ್ವರಿತವಾಗಿ ವರ್ಗಾಯಿಸುವ ಪ್ರಯತ್ನ, ಕೃಷಿ ವಿಜ್ಞಾನ ಕೇಂದ್ರಗಳು ಮಾಡುತ್ತಿವೆ ಎಂದರು.

<><><>

ವಿಶ್ವದಲ್ಲಿಯೇ ಅತ್ಯುನ್ನತವಾದ ನ್ಯಾಯ ವ್ಯವಸ್ಥೆ ಭಾರತದ್ದು ಎಂದು, ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ವಿ. ಶ್ರೀಶಾನಂದ ಹೇಳಿದ್ದಾರೆ. ಗದಗ ಜಿಲ್ಲಾ ವಕೀಲರ ಸಂಘದ ಸಭಾಂಗಣದಲ್ಲಿ, ಮೂರು ದಿನಗಳ ಕಾನೂನು ಕಾರ್ಯಾಗಾರವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಕಾನೂನು ಸಾಕ್ಷರತೆ ನಾಗರಿಕ ಸಮಾಜದ ಕುರುಹು ಎಂದರು. ಕಾನೂನು ಖಾತೆ ಸಚಿವ ಎಚ್.ಕೆ. ಪಾಟೀಲ ಅವರು ಮಾತನಾಡಿ, ಜಿಲ್ಲೆಯ ನೂರು ಗ್ರಾಮಗಳನ್ನು ವ್ಯಾಜ್ಯ ಮುಕ್ತ ಗ್ರಾಮಗಳನ್ನಾಗಿಸುವುದು, ಸರ್ಕಾರದ ಉದ್ದೇಶವಾಗಿದೆ ಎಂದರು.

<><><>

ಪಂಡಿತ ಬಸವರಾಜ ರಾಜಗುರು ಅವರ, 33ನೇ ಪುಣ್ಯ ಸ್ಮರಣೆ ಹಿನ್ನೆಲೆ, ಧಾರವಾಡ ಹೊಸಯಲ್ಲಾಪುರದ ರಾಜಗುರು ಸ್ಮಾರಕದಲ್ಲಿ, ಟ್ರಸ್ಟ್ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಹಾಗೂ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಶ್ರದ್ಧಾಂಜಲಿ ಸಲ್ಲಿಸಿದರು. ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ, ಸಂಜೆ ಸ್ವರ ಸಾಮ್ರಾಟ ಪಂಡಿತ ಬಸವರಾಜ ರಾಜಗುರು ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಸಂಜೆ ವಿಶೇ ಸಂಗೀತ ಕಾರ್ಯಕ್ರಮ ಆಯೋಜಿಸಿತ್ತು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಆಷಾಢ ಮಾಸದ ಹುಣ್ಣಿಮೆ, ಗುರು ಪೂರ್ಣಿಮೆ ಹಿನ್ನೆಲೆ, ವಿಜಯಪುರ ಜ್ಞಾನ ಯೋಗಾಶ್ರಮ, ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮೀಜಿ ಮಠ ಸೇರಿದಂತೆ, ನಾಡಿನಾದ್ಯಂತ ವಿಶೇಷ ಕಾರ್ಯಕ್ರಮಗಳು ಭಾನುವಾರ ಜರುಗಿದವು. ಮಹರ್ಷಿ ವೇದವ್ಯಾಸರ ಸ್ಮರಣೆ ಅಂಗವಾಗಿ, ಗುರು ವಂದನೆ ಈ ದಿನದ ವಿಶೇಷ.

<><><>

ಅಲ್ಲಮ್ಮ ಪ್ರಭುಗಳು, ಹಡಪದ ಅಪ್ಪಣ್ಣನವರನ್ನು ನಿಜ ಸುಖಿ ಎಂದು ಕರೆದಿದ್ದಾರೆ. ಅಂತಹ ಶಿವ ಶರಣ ಹಡಪದ ಅಪ್ಪಣ್ಣನವರ ಜಯಂತಿಯನ್ನು, ಶ್ರದ್ಧಾ-ಭಕ್ತಿಯಿಂದ ನಾಡಿನಾದ್ಯಂತ ಆಚರಿಸಿದ ವರದಿಗಳು ಬಂದಿವೆ.

<><><>

ಧಾರವಾಡ ಜಿಲ್ಲೆ, ನವಲಗುಂದ ಹಾಗೂ ಅಳಗವಾಡಿ ಗ್ರಾಮದಲ್ಲಿ, ರೈತ ಮುಖಂಡರ ಸಮ್ಮುಖದಲ್ಲಿ, ರೈತ ಹುತಾತ್ಮ ದಿನಾಚರಣೆ ಜರುಗಿತು.

<><><>

ಸಂಸತ್ತಿನ ಮುಂಗಾರು ಅಧಿವೇಶನ, ಇಂದಿನಿಂದ ಆರಂಭವಾಗಲಿದೆ. ಹಣಕಾಸು ಖಾತೆ ಸಚಿವರಾದ ನಿರ್ಮಲಾ ಸೀತಾರಾಮನ್ ನಾಳೆ, ಕೇಂದ್ರದ ಬಜೆಟ್ ಮಂಡಿಸಲಿದ್ದಾರೆ.

<><><>

ರಾಜ್ಯದಲ್ಲಿ ಹೊಸದಾಗಿ, 469 ಡೆಂಘೀ ಪ್ರಕರಣಗಳು ಪತ್ತೆಯಾಗಿವೆ. ಧಾರವಾಡ ಜಿಲ್ಲೆಯಲ್ಲಿ, 12 ಜನರಿಗೆ ಡೆಂಘೀ ದೃಢ ಪಟ್ಟಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಹೆದ್ದಾರಿ ಕಾಮಗಾರಿಗಾಗಿ, ಗುಡ್ಡ ಕಡಿದಿದ್ದು ಅವಘಡಕ್ಕೆ ಕಾರಣ; ಕೇಂದ್ರ ಸಚಿವ ಗಡ್ಕರಿ ಅವರೊಂದಿಗೆ ಸಮಾಲೋಚನೆ – ಮುಖ್ಯಮಂತ್ರಿ ಸಿದ್ದರಾಮಯ್ಯ.**
- **ಭೂ ಕುಸಿತ ತಡೆಯಲು, ವೈಜ್ಞಾನಿಕ ರಸ್ತೆ ಕಾಮಗಾರಿ ಅಗತ್ಯ – ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ.**
- **ಕೊಡಗು, ಶಿವಮೊಗ್ಗ ಸೇರಿದಂತೆ ಪಶ್ಚಿಮಘಟ್ಟ ತಪ್ಪಲಿನ ದೇವರ ಕಾನುಗಳಿಗೆ, ರೈತರೇ ರಕ್ಷಣೆ – ಸೋಂದಾ ಸ್ವರ್ಣವಲ್ಲೀ ಶ್ರೀ.**
- **ಇಂದು ರಾಷ್ಟ್ರೀಯ ಧ್ವಜ ದಿನಾಚರಣೆ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>

**ಹರ್ಷ**